ಇ) ಉದ್ಭವಿಸುವುದಿಲ್ಲ.

ಧಾರವಾಡ ನಗರದಲ್ಲಿ ಐ.ಟಿ.ಐ ತರಬೇತಿ ಕೇಂದ್ರ

1749 (2346) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ನಗರದಲ್ಲಿ ಐ.ಟಿ.ಐ ತರಬೇತಿ ಕೇಂದ್ರವನ್ನು ಎಂದು ಪ್ರಾರಂಭಿಸಲಾಗಿದೆ ಮತ್ತು ಎಷ್ಟು ವಿಭಾಗಗಳು ನಡೆಯುತ್ತಿವೆ.

ಆ) ಇವತ್ತಿನ ಮಾನವ ಸಂಪನ್ಮೂಲದ ಅವಶ್ಯಕತೆ ಗಮನಿಸಿ ಹೊಸ ವಿಭಾಗಗಳನ್ನು ಪ್ರಾರಂಭಿಸುವ ಯೋಜನೆ ಇದೆಯೆ.

ಇ) ಸದರಿ ಐ.ಟಿ.ಐ. ಕೇಂದ್ರಕ್ಕೆ ಸ್ವಂತ ಸುಸಜ್ಜಿತ ಕಟ್ಟಡ ಇದೆಯೆ ಅಥವಾ ಇಲ್ಲವೆ;

ಈ) ಇದಕ್ಕಾಗಿ ಸ್ವಂತ ಕಟ್ಟಡ ಕಟ್ಟಿಸುವ ಯೋಜನೆ ಸರ್ಕಾರಕ್ಕಿದೆಯೆ; ಸದರಿ ಕಟ್ಟಡಕ್ಕಾಗಿ ಹಣ ನಿಗಧಿಮಾಡಿ ಬಿಡುಗಡೆ ಮಾಡಲಾಗುವುದೇ?

ಶ್ರೀ ಖಿರುಮಲ್ ಇಸ್ಲಾಂ (ಕಾರ್ಮಿಕ ಸಚಿವರು)

1. ಪಾರಂಭಿಸಿದ ವರ್ಷ 1999-2000

2. ವೃತ್ತಿಗಳ ವಿವರಗಳು ಈ ಕೆಳಕಂಡಂತಿವೆ:-

ಕ್ರ.ಸಂ.	ವೃತ್ತಿ	ಹಿರಿಯ	ಕಿರಿಯ	ಒಟ್ಟು
1.	ಎಲೆಕ್ಟ್ರೀಷಿಯನ್	16	16	32
2.	ಫಿಟ್ಟರ್	16	16	32
3.	ಎಲೆಕ್ಟ್ರಾನಿಕ್ ಮೆಕ್ಯಾನಿಕ್	16	16	32
4.	ಎಂ.ಆರ್.ಎ.ಸಿ	16	16	32
	ಒಟ್ಟು	64	64	128

ಅ) ಇಲ್ಲ

ಇ) ಇಲ್ಲ

ಈ) ಹೌದು,

ಈ ಬಗ್ಗೆ ಪರಿಶೀಲಿಸಲಾಗುವುದು.

ಕೃಷ್ಣರಾಜಪೇಟೆಯ ಮಿನಿ ವಿಧಾನಸೌಧ ನಿರ್ಮಾಣ

1751 (1930) ಶ್ರೀ ಚಂದ್ರಶೇಖರ್ ಕೆ.ಬಿ. (ಕೆ.ಆರ್. ಪೇಟೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜ ಪೇಟೆಯಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುತ್ತದೆ; ಮಂಜೂರಾಗಿರುವ ಹಣವೆಷ್ಟು;

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು)

ಅ) ಅಗತ್ಯ ಸಂಪನ್ಮೂಲಗಳನ್ನು ಸಂಗ್ರಹಿಸುವ ಕಾರ್ಯಗತಿ ಅಂತಿಮಗೊಳಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ. ಸಂಪನ್ಮೂಲಗಳನ್ನು ಸಂಗ್ರಹಿಸುವ ಕಾರ್ಯ ಸಂಪೂರ್ಣಗೊಂಡ

ನಂತರ ಸವಿವರ ಅಂದಾಜುಪಟ್ಟಿಯನ್ನು ಅಂತಿಮಗೊಳಿಸಿ ಮಿನಿ ವಿಧಾನ ಸೌಧ ನಿರ್ಮಾಣವನ್ನು ಪ್ರಾರಂಭಿಸಲಾಗುವುದು. ಇಲ್ಲಿಯವರೆವಿಗೂ ಈ ಕಾಮಗಾರಿಗೆ ಹಣವನ್ನು ಮಂಜೂರು ಮಾಡಿರುವುದಿಲ್ಲ.

ಶಿವಮೊಗ್ಗ ತಾಲ್ಲೂಕಿನಲ್ಲಿ ಹಾದು ಹೋಗುವ ಹೊಸಪೇಟೆ ಮಂಗಳೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿ

1752 (1373) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನ ಅಂದರೆ ಶಿವಮೊಗ್ಗ ನಗರ ಹಾಗೂ ಶಿವಮೊಗ್ಗ ತಾಲ್ಲೂಕಿನ ಸಕ್ರೆಬೈಲು ಗ್ರಾಮದವರೆಗೆ ಹಾದು ಹೋಗುವ ಹೊಸಪೇಟೆ-ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಡಾಂಬರೀಕರಣ ಕಾಮಗಾರಿ ಯೋಜನೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದರೆ, ಯಾವಾಗ ಪ್ರಾರಂಭವಾಗುವುದು; (ವಿವರ ನೀಡುವುದು)?

ಶ್ರೀ ಧರ್ಮ್‌ಸಿಂಗ್ (ಲೋಕೋಪಯೋಗಿ ಸಚಿವರು)

ಅ) ರಾಷ್ಟ್ರೀಯ ಹೆದ್ದಾರಿ-13 (ಮುಂದುವರೆದ ಭಾಗ) ಚಿತ್ರದುರ್ಗ-ಮಂಗಳೂರು ರಸ್ತೆಯ ಭಾಗವಾದ ಶಿವಮೊಗ್ಗ ನಗರದಿಂದ ಸಕ್ರೆಬೈಲು ವರೆಗೆ (ಕಿಮೀ 530.25 ರಿಂದ 544.00) 13.75 ಕಿ.ಮೀ. ಇರುತ್ತದೆ. ರಸ್ತೆಯ ಈ ಭಾಗದ ಹಾಲಿ ಸಂಚಾರ ಪಥದ ಅಭಿವೃದ್ಧಿಗಾಗಿ ರೂ. 214.00 ಲಕ್ಷ ರೂ.ಗಳ ಅಂದಾಜು ಪಟ್ಟಿಯನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯಕ್ಕೆ ಅನುಮೋದನೆಗೆ ಸಲ್ಲಿಸಲಾಗಿದ್ದು ಅನಮೋದನೆಯನ್ನು ನಿರೀಕ್ಷಿಸಿದೆ. ಅಂದಾಜುಪಟ್ಟಿಗೆ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶಿವಮೊಗ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿ ಇರುವ ಯುವಕ ಸಂಘಗಳಿಗೆ ಪ್ರೋತ್ಸಾಹ ಧನ

1753 (1374) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯುವಜನಸೇವೆ ಮತ್ತು ಕ್ರೀಡಾ ಇಲಾಖೆ ವತಿಯಿಂದ ನೊಂದಾಯಿಸಲ್ಪಟ್ಟ ಯುವಕ ಸಂಘಗಳ ಸಂಖ್ಯೆ ಎಷ್ಟು? ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಸಂಘಗಳಿಗೆ ನೀಡಲಾಗಿರುವ ಅನುದಾನವೆಷ್ಟು? (ವಿವರ ನೀಡುವುದು)

ಆ) ಶಿವಮೊಗ್ಗ ತಾಲ್ಲೂಕು ವ್ಯಾಪ್ತಿಯ ಗ್ರಾಮೀಣ ಪ್ರದೇಶದಲ್ಲಿ ಯುವಜನಸೇವೆ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬಯಲು ರಂಗಮಂದಿರ ನಿರ್ಮಾಣ ಯೋಜನೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಈವರೆಗೆ ಎಷ್ಟು ರಂಗ ಮಂದಿರ ಕಟ್ಟಲಾಗಿದೆ?

ಇ) ಶಿವಮೊಗ್ಗ ನಗರದಲ್ಲಿ ಗರಡಿಮನೆ ಅಭಿವೃದ್ಧಿ ಸಲುವಾಗಿ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೆ? ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮಕ್ಕೆಗೊಳ್ಳಲಿದೆ?

ಈ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಜನ ಕುಸ್ತಿಪಟುಗಳಿಗೆ ಪಿಂಚಣಿ ಸೌಲಭ್ಯ ನೀಡಲಾಗಿರುತ್ತದೆ? (ವಿವರ ನೀಡುವುದು)?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು)